E-mail : academic.pg@kud.ac.in
Website: kud.ac.in

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ -580003

KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

Azadi Ka Amrit Mahotsav

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ

No.KU/Aca/P.G./Ph.D/Crt/2023-24/34 Date : 13-10-2023

# ಸುತ್ತೋಲೆ

ವಿಷಯ : ಸನ್ 2023-24 ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ 1 ಮತ್ತು 2ನೇ ವರ್ಷದ ಪದವಿ ಮತ್ತು ಇನ್ನಿತರ ಕೋರ್ಸಗಳಿಗೆ ಶುಲ್ಕಗಳನ್ನು ನಿಗದಿಪಡಿಸಿದ ಕುರಿತು.

ಉಲ್ಲೇಖ :1. KU/Aca/P.G/Ph.D/Crt/216 dated: 15.09.2023
2. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕ ವಿಭಾಗದ ನಿರ್ಣಯದ ಸಂಖ್ಯೆ: 853 ದಿನಾಂಕ:06.10.2023
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13-10-2023

ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜಕರು ಕ.ವಿ.ವಿ ಧಾರವಾಡ/ ಆಡಳಿತಾಧಿಕಾರಿಗಳು ಕಾರವಾರ/ಗದಗ ಇವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸನ್ 2023-24ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ 1 ಮತ್ತು 2ನೇ ವರ್ಷದ/ಸ್ನಾತಕೋತ್ತರ ಡಿಪ್ಲೋಮಾ/ಸರ್ಟಿಫಿಕೇಟ್ ಪದವಿ ಕಾರ್ಯಕ್ರಮಗಳ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದ್ದು ಹಾಗೂ ವಿದೇಶಿ/ಎನ್.ಆರ್.ಐ.ವಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕಗಳ ರಚನಾ ಯಾದಿಯನ್ನು ಈ ಮೂಲಕ ಪ್ರಕಟಪಡಿಸಲಾಗಿದೆ.

ಪ್ರಚಲಿತ ಸರ್ಕಾರಿ ಆದೇಶದ ಅನುಸಾರ ನಿಬಂಧನೆಗೊಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಈ ಕೆಳಗಿನ ಅಂಶಗಳನ್ನು ಅನುಸರಿಸಬೇಕು.

1. a. ಸ್ನಾತಕೋತ್ತರ/ಸ್ನಾತಕೋತ್ತರಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೇಟ್ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಎಲ್ಲ ಮೂಲಗಳಿಂದ ರೂ. 2,50,000/- ಗಳ ಮಿತಿಯೊಳಗಿರುವಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾಥಿಗಳಿಗೆ ಪೂರ್ಣ (100%) ರಷ್ಟು ಶುಲ್ಕ ವಿನಾಯ್ತಿ ನೀಡುವ ಪೂರ್ವದಲ್ಲಿ ಭಾರತ ಸರಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವಂತೆ ಹಾಗೂ ದಿ:14.09.2023ರ ಎಸ್‌ಸಿ/ಎಸ್‌ಟಿ ಘಟಕದ ಸಮಿತಿ ಸಭೆಯ ನಡುವಳಿಯಲ್ಲಿ ತಿಳಿಸಿದಂತೆ Freeship Card ನ್ನು ಹೊಂದಿದ ಅರ್ಹ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ **ಮಾತ್ರ** ಪ್ರವೇಶಾತಿ ಸಮಯದಲ್ಲಿ ಈ ಕೆಳಗಿನ ಶುಲ್ಕಗಳನ್ನು ವಿನಾಯಿತಿ ನೀಡಬೇಕು.

**1.ಪ್ರವೇಶ ಶುಲ್ಕ 2.ನೊಂದಣಿ ಶುಲ್ಕ 3.ಬೋಧನಾ ಶುಲ್ಕ 4. ಪ್ರಯೋಗಾಲಯ ಶುಲ್ಕ 5.ಕ್ರೀಡಾ ಶುಲ್ಕ
6.ಗ್ರಂಥಾಲಯ ಶುಲ್ಕ 7.ವೈದ್ಯಕೀಯ ಶುಲ್ಕ 8.ಪರೀಕ್ಷಾ ಶುಲ್ಕ
9.ಇತರ ಕಡ್ಡಾಯ ಶುಲ್ಕಗಳು ಗರಿಷ್ಠ ರೂ. 500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು.**

b. ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು Freeship Card ನ್ನು ಸರ್ಕಾರದಿಂದ ಪಡೆಯುವ ವಿಧಾನದ ಬಗ್ಗೆ ಸಬಲೀಕರಣ ಅಧಿಕಾರಿಗಳು (Empowerment Officer) ವಿದ್ಯಾರ್ಥಿ ಧಾಮ (Student Home) ಅಥವಾ ಉಪಕುಲಸಚಿವರು ಎಸ್‌ಸಿ/ಎಸ್‌ಟಿ ಘಟಕ ಕವಿವಿ ಧಾರವಾಡ ಇವರನ್ನು ಸಂಪರ್ಕಿಸುವುದು.

c. ವಿದ್ಯಾರ್ಥಿಗಳಿಗೆ ಸರ್ಕಾರದಿಂದ (SSP Scholarship) ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಬಿಡುಗಡೆಯಾದ ನಂತರ ವಿಶ್ವವಿದ್ಯಾಲಯಕ್ಕೆ ಭರಿಸಬೇಕು. ಇಲ್ಲವಾದಲ್ಲಿ ಸರಕಾರದ ಆದೇಶದಂತೆ ನಿಯಮಾನುಸಾರ ಇನ್ನಿತರ ಮಾರ್ಗದ ಮುಖಾಂತರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಮತಿ ನೀಡುವುದಿಲ್ಲ ಈ ಕುರಿತು ಪ್ರವೇಶ ಪಡೆಯುವ ಸಮಯದಲ್ಲಿ ಮುಚ್ಚಳಿಕೆ ಪ್ರಮಾಣಪತ್ರ (Undertaking letter)ವನ್ನು ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

2. ಸ್ನಾತಕೋತ್ತರ/ಸ್ನಾತಕೋತ್ತರಡಿಪ್ಲೋಮಾ/ಡಿಪ್ಲೋಮಾ ಪದವಿಗಳಿಗೆ ಪ್ರವೇಶ ಪಡೆಯುವ ಪ್ರವರ್ಗ-1/ಹಿಂದುಳಿದವರ್ಗ (2ಎ,2ಬಿ,3ಎ,3ಬಿ) ಮತ್ತು ಅಲ್ಪಸಂಖ್ಯಾತರ (Minority: Muslim, Christian, Jain, Sikh, Boudha, Parsi) ವಿದ್ಯಾರ್ಥಿಗಳ ಶಿಷ್ಯವೇತನದ ಮೊತ್ತವು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಜಮೆಯಾಗುವುದರಿಂದ, ಸನ್ 2023-24ನೇ ಸಾಲಿನ ಸದರ ವಿದ್ಯಾರ್ಥಿಗಳಿಂದ ಪ್ರವೇಶ ಪಡೆಯುವ ಸಮಯದಲ್ಲಿ ಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ಭರಿಸಿಕೊಳ್ಳುವುದು.

3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಈ ಎಲ್ಲ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಸಲ್ಲಿಸುವ ಆದಾಯ ಪ್ರಮಾಣ ಪತ್ರದ ಕಾಲಾವಧಿಯು 5 ವರ್ಷಗಳವರೆಗೆ ಊರ್ಜಿತವಾಗಿರುವುದರಿಂದ ವಿದ್ಯಾರ್ಥಿಗಳು ಸರಕಾರದ ಸಂಬಂಧಿಸಿದ ಇಲಾಖೆಯಿಂದ ಪಡೆದ 5 ವರ್ಷದೊಳಗಿನ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು.

4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಸಲ್ಲಿಸುವ ಜಾತಿ ಪ್ರಮಾಣ ಪತ್ರಕ್ಕೆ ಕಾಲಾವಧಿಯ ಮಿತಿ ಇರುವುದಿಲ್ಲ.ಆದರೆ Freeship Card ನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.
**ಹೆಚ್ಚಿನ ಮಾಹಿತಿಗಾಗಿ:ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ಹಿಂದುಳಿದ ವರ್ಗಗಳ ಘಟಕದ ಸಂಯೋಜನಾಧಿಕಾರಿಗಳು, ಕ.ವಿ.ವಿ.ಧಾರವಾಡ ಇವರನ್ನು ಸಂಪರ್ಕಿಸುವುದು.**

5. ಕರ್ನಾಟಕ ಮತ್ತು ಸರಕಾರಿ ಆದೇಶ ಸಂಖ್ಯೆ: ಇಡಿ/35/ಇಜಿಒವಿ/2021 ದಿ:04.11.2021ರ ಪತ್ರದಲ್ಲಿ ಹಾಗೂ ಸರಕಾರದ ಆದೇಶ ಸಂಖ್ಯೆ:AGRI-AML/141/2021,ಬೆಂಗಳೂರು ದಿನಾಂಕ:07.08.2021ರಲ್ಲಿ ತಿಳಿಸಿದಂತೆ ರೈತರ ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಹೊಸ ಶಿಕ್ಷಣ ವೇತನ (Scholarship) ಯೋಜನೆಯನ್ನು ಜಾರಿಗೆ ತರಲಾಗಿದ್ದು ಅದರಂತೆ, ಈ ಶಿಷ್ಯವೇತನವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ರೈತರ ಮಕ್ಕಳು ರಾಜ್ಯದ ಇತರೆ ಯಾವುದೇ (SC/ST/OBC/Minority)ಶಿಷ್ಯವೇತನವನ್ನು ಪಡೆಯಲು ಆಗದಿದ್ದಲ್ಲಿ, ರೈತರ ಮಕ್ಕಳ ಶಿಷ್ಯವೇತನಕ್ಕೆ http://ssp.postmartic.karnataka.gov.in ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

6. ಸರ್ಕಾರಿ ಆದೇಶದನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಡಿಯಲ್ಲಿ Freeship Card ಹೊಂದಿ ಶುಲ್ಕ ವಿನಾಯತಿ ಪಡೆದ ವಿದ್ಯಾರ್ಥಿಗಳು ಶಿಷ್ಯವೇತನ ಮತ್ತು ಶುಲ್ಕ ವಿನಾಯತಿ ಮರುಪಾವತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಪ್ರವೇಶ ಅರ್ಜಿ ಸಲ್ಲಿಸುವ ಸಮಯದಲ್ಲಿ ಮುಚ್ಚಳಿಕೆ ಪ್ರಮಾಣಪತ್ರ ನೀಡಿದಂತೆ ಎರಡನೇ ಸೆಮೆಸ್ಟರ್ ಪ್ರವೇಶ ಪಡೆಯುವ ಸಮಯದಲ್ಲಿ ವಿದ್ಯಾರ್ಥಿಗಳಿಂದ ಸದರಿ ವರ್ಷದ ಪೂರ್ಣ ಶುಲ್ಕವನ್ನು ಭರಿಸಿಕೊಳ್ಳಬೇಕು.

7. ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರದಿಂದ, ಒಂದೇ ಕೋರ್ಸಗೆ ಶಿಷ್ಯವೇತನ ಮತ್ತು ಶುಲ್ಕ ವಿನಾಯತಿ ಮಂಜೂರಾಗುವುದರಿಂದ ಸ್ನಾತಕೋತ್ತರ/ಎಂ.ಫಿಲ್/ಪಿಎಚ್.ಡಿ ಕೋರ್ಸಿನೊಂದಿಗೆ ಡಿಪ್ಲೋಮಾ ಮತ್ತು ಸ್ನಾತಕೋತ್ತರಡಿಪ್ಲೋಮಾ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಪೂರ್ಣ (GM) ಶುಲ್ಕವನ್ನು ಭರಿಸಿಕೊಳ್ಳುವುದು.

8. ಸ್ನಾತಕೋತ್ತರ ಕೋರ್ಸಗೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ಹಿಂದುಳಿದ ವರ್ಗ 2ಎ,2ಬಿ,3ಎ,3ಬಿ ವಿದ್ಯಾರ್ಥಿಗಳು ಈ ಮೊದಲು ಕರ್ನಾಟಕ ವಿಶ್ವವಿದ್ಯಾಲಯದಿಂದ ನಿಯಮಿತವಾಗಿ (Regular) ಸ್ನಾತಕೋತ್ತರ ಕೋರ್ಸ ಪೂರ್ಣಗೊಳಿಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪುನಃ ಬೇರೆ ಸ್ನಾತಕೋತ್ತರ ಕೋರ್ಸಗೆ ಪ್ರವೇಶ ಪಡೆದಲ್ಲಿ ಸರ್ಕಾರದಿಂದ ಶಿಷ್ಯವೇತನ ಮಂಜೂರಾಗುವುದಿಲ್ಲ. ಆದ್ದರಿಂದ, ಅಂತಹ ವಿದ್ಯಾರ್ಥಿಗಳಿಂದ ಪೂರ್ಣ ಶುಲ್ಕವನ್ನು ಭರಿಸಿಕೊಳ್ಳುವುದು.

9. ಸ್ನಾತಕೋತ್ತರ/ಸ್ನಾತಕೋತ್ತರಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೇಟ್ ಪದವಿ ಕಾರ್ಯಕ್ರಮಗಳ ಪ್ರವೇಶ ಶುಲ್ಕವನ್ನು ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಭರಿಸಿದಲ್ಲಿ ಅಂತಹ ವಿದ್ಯಾರ್ಥಿಗಳು ಭರಿಸಿದ ಚಲನ್‌ಗಳ 3 ಪ್ರತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು ಅವಶ್ಯವಿರುತ್ತದೆ. ಅದೇ ರೀತಿ ಆಫ್‌ಲೈನ್ ಮುಖಾಂತರ ಭರಿಸಿದಲ್ಲಿ ಅಂತಹ ವಿದ್ಯಾರ್ಥಿಗಳು ಭರಿಸಿದ ಚಲನ್‌ಗಳ 4 ಪ್ರತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು.

**ಕುಲಸಚಿವರು**

ಅಡಕ : ಶುಲ್ಕ ರಚನಾ ಯಾದಿ

ಪ್ರತಿಯನ್ನು ಸಾದರಪೂರ್ವಕವಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ :

1. ಅಧ್ಯಕ್ಷರು/ಸಂಯೋಜಕರು, ಎಲ್ಲ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ ಧಾರವಾಡ.
2. ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಗದಗ,ಹಾವೇರಿ,ಕಾರವಾರ.
3. ಸಂಯೋಜಕರು, ಎಂ. ಕಾಂ/ಎಂ. ಕಾಂ (ಸಿ.ಎಸ್.) ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
4. ಸಂಯೋಜಕರು, ಎಂ.ಎಸ್ಸಿ (ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಕ ವಿಜ್ಞಾನ ಮತ್ತು ಗಣಿತಶಾಸ್ತ್ರ) ಸ್ನಾತಕೋತ್ತರ ಅಧ್ಯಯನ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
5. ಸಂಯೋಜಕರು, ಎಂ.ಟಿ.ಎ ಸ್ನಾತಕೋತ್ತರ ಅಧ್ಯಯನ ವಿಭಾಗ, ಕರ್ನಾಟಕ ಮಹಾವಿದ್ಯಾಲಯ, ಧಾರವಾಡ.
6. ಸಂಯೋಜಕರು, (ಇಂಗ್ಲೀಷ, ಅರ್ಥಶಾಸ್ತ್ರ) ಸ್ನಾತಕೋತ್ತರ ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
7. ಸಬಲೀಕರಣ ಅಧಿಕಾರಿಗಳು, ವಿದ್ಯಾರ್ಥಿಧಾಮ, ಕ.ವಿ.ವಿ.ಧಾರವಾಡ.
8. ಉಪಕುಲಸಚಿವರು (ಎಸ್.ಸಿ/ಎಸ್‌ಟಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕ. ಕ.ವಿ.ವಿ. ಧಾರವಾಡ.
9. ವಿಶೇಷಾಧಿಕಾರಿಗಳು ಪ್ರವರ್ಗ-1 ಘಟಕ. ಕ.ವಿ.ವಿ. ಧಾರವಾಡ.
10. ವಿಶೇಷಾಧಿಕಾರಿಗಳು ಅಲ್ಪಸಂಖ್ಯಾತರ ಹಿಂದುಳಿದ ವರ್ಗ ಘಟಕ ಕ.ವಿ.ವಿ. ಧಾರವಾಡ.

ಪ್ರತಿ ಸಾದರಪೂರ್ವಕವಾಗಿ :

1. ಕುಲಸಚಿವರು (ಮೌಲ್ಯಮಾಪನ) ಕ.ವಿ.ವಿ ಧಾರವಾಡ.
2. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ ಕ.ವಿ.ವಿ. ಧಾರವಾಡ.
3. ನಿರ್ದೇಶಕರು, ಸಿ.ಡಿ.ಸಿ./ಯುಇಐಜಿಬಿ/ಕ್ರೀಡಾ/ವಿದ್ಯಾರ್ಥಿ ಕಲ್ಯಾಣ/ಎನ್.ಎಸ್.ಎಸ್. ಕ.ವಿ.ವಿ. ಧಾರವಾಡ.
4. ನಿರ್ದೇಶಕರು, ಕಂಪ್ಯೂಟರ್ ನೆಟವರ್ಕ,ಇಂಟರನೆಟ್ ವಿಭಾಗ, ಕ.ವಿ.ವಿ. ಧಾರವಾಡ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಕ್ಕಾಗಿ :

1. ಅಧೀಕ್ಷಕರು, ಸಿ.ಡಿ.ಸಿ./ಯುಇಐಜಿಬಿ/ಕ್ರೀಡಾ/ವಿದ್ಯಾರ್ಥಿ ಕಲ್ಯಾಣ/ಎನ್.ಎಸ್.ಎಸ್/ಹಣಕಾಸು ವಿಭಾಗ ಕ.ವಿ.ವಿ. ಧಾರವಾಡ.

ಪ್ರತಿ :

1. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
2. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ (ಮೌಲ್ಯಮಾಪನ) ಕಾರ್ಯಾಲಯ, ಕ.ವಿ.ವಿ. ಧಾರವಾಡ.